ಹಳದಿ ರೋಗ ಬಂದು ಬಹಳಷ್ಟು ಮಲೆನಾಡು ಪ್ರದೇಶದ ಬಾಗಾಯ್ತು ಜಮೀನು ಹಾಳಾಗಿ ಹೋಗಿದೆ ಎನ್ನತಕ್ಕದ್ದರ ಬಗ್ಗೆ ಸರ್ಕಾರದ ವಿವರಣೆಯನ್ನು ಕೇಳಿದ್ದೆ. ಅದಕ್ಕೆ ಪರಿಹಾರ ರೂಪದ ಉತ್ತರವೂ ಕೂಡ ನನಗೆ ಇದುವರೆಗೂ ತಲುಪಿಲ್ಲ.

ಅಧ್ಯಕ್ಷರು: ಮಾನ್ಯ ಸದಸ್ಯರು ಅಡಿಕೆ ಬೆಳೆಗೆ ಹಳದಿ ರೋಗ ಬಂದಿದೆ ಎಂದು ಹೇಳುತ್ತಿದ್ದಾರೆ. ಆದ್ದರಿಂದ, ಮಾನ್ಯ ಕೃಷಿ ಮಂತ್ರಿಗಳು ಅದರ ಬಗ್ಗೆ ಏನಾದರೂ ಹೇಳುವುದು ಇದ್ದರೆ ತಿಳಿಸಬೇಕು.

7) **ಮಲೆನಾಡಿನಲ್ಲಿ ಅಡಿಕೆಬೆಳೆಗೆ ಹಳದಿ ರೋಗ ತಗುಲಿ, ಪರಿಹಾರಕ್ಕಾಗಿ ಒತ್ತಾಯ:**

ಶ್ರೀ ಯು.ಕೆ. ಶಾಮಣ್ಣ: ಅಧ್ಯಕ್ಷರೆ, ಸುಮಾರು 10-15 ವರ್ಷಗಳಿಂದ ಇದರ ಬಗ್ಗೆ ಸಂಶೋಧನೆ ನಡೆಯುತ್ತಿದೆ ಎಂದು ಹೇಳಿದ್ದಾರೆಯೇ ಹೊರತು ಆ ಒಂದು ಸಂಶೋಧನೆ ನಮ್ಮ ಮಲೆನಾಡು ಪ್ರದೇಶದಲ್ಲಿ ಇಲ್ಲ. ಮಲೆನಾಡಿನಲ್ಲಿ ಅಡಿಕೆ ಬೆಳೆಯುವಂಥದ್ದು ನಮ್ಮ ಮುಖ್ಯ ವ್ಯವಸಾಯದ ಕಸುಬು ಆಗಿರುವುದರಿಂದ ಅಲ್ಲಿ ಸಂಶೋಧನೆ ಕಾರ್ಯಕ್ರಮ ನಡೆದಿಲ್ಲ. ಅಲ್ಲಿರುವಂಥ ಜನತೆಗೆ ಗೊತ್ತಿರುವ ಹಾಗೆ ಎಲ್ಲಿಯೂ ಸಂಶೋಧನೆ ನಡೆದಿಲ್ಲ. ಬಹುಶಃ ತೀರ್ಥಹಳ್ಳಿಯಲ್ಲಿ ನಡೆಯುತ್ತಿದೆ. ಆದರೆ ಅಡಿಕೆ ಡಿಸೀಸ್ ಬಗ್ಗೆ ಯಾವ ಒಂದು ಪರಿಹಾರವನ್ನು ಕಂಡುಹಿಡಿದಿಲ್ಲ. ಅದರ ಬಗ್ಗೆ ನಾವು ಈ ರೀತಿ ಮಾಡಿದ್ದೇವೆಂದು ಹೇಳತಕ್ಕಂಥ ಒಂದು ಯೋಜನೆಯನ್ನು ಕೂಡ ಹಾಕಿಲ್ಲ. ಅದರ ಬಗ್ಗೆ ಸರ್ಕಾರದ ಪರವಾಗಿ ಉತ್ತರ ಬರಲಿಲ್ಲ. ದಯವಿಟ್ಟು ಸರ್ಕಾರ ಉತ್ತರ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ: ಅಧ್ಯಕ್ಷರೆ, ಈ ಒಂದು ಸೂಚನೆಗೆ ಈಗಾಗಲೇ ಉತ್ತರವನ್ನು ತಮ್ಮ ಮೂಲಕ ಕಳುಹಿಸಿಕೊಟ್ಟಿದ್ದೇವೆ. ಈ ಹಳದಿ ರೋಗ ಬರುವಂಥ ಖಾಯಿಲೆ ಇವೊತ್ತಿನದಲ್ಲ. ಕಳೆದ 40 ವರ್ಷಗಳಿಂದಲೂ ಚಿಕ್ಕಮಂಗಳೂರು, ತೀರ್ಥಹಳ್ಳಿ ಭಾಗದಲ್ಲಿ ಆ ಖಾಯಿಲೆ ಇದೆ. ಇತ್ತೀಚಿನ ದಿನಗಳಲ್ಲಿ ಈ ಕಾಯಿಲೆ ಜಾಸ್ತಿಯಾಗಿದೆ. ಈ ಬಗ್ಗೆ ವಿಶ್ವವಿದ್ಯಾಲಯದವರು ಆಗಲಿ, ಸರ್ಕಾರದವರಾಗಲೀ, ಸಂಶೋಧನೆಯನ್ನು ಮಾಡಿದರೂ ಕೂಡ ಅದರಲ್ಲಿ ಯಾವುದೇ ಪ್ರಯೋಜನ ಆಗಿಲ್ಲ. ಆ ಒಂದು ಕಾಯಿಲೆ ಬರದಂತೆ ತಡೆಗಟ್ಟಲು ತಮಿಳುನಾಡು ಮತ್ತು ಕೇರಳಾ ಸರ್ಕಾರದವರು ಕೂಡ ಸಾಕಷ್ಟು ಸಂಶೋಧನೆ ಮಾಡಿದ್ದಾರೆ. ಅವರಿಗೂ ಕೂಡ ಅದು ಸಾಧ್ಯವಾಗಿಲ್ಲ. ಈಗ ಅದರ ಬಗ್ಗೆ ಬದಲಿ ವ್ಯವಸ್ಥೆ ಮಾಡಲಿಕ್ಕೆ ಸಾಧ್ಯವೇ ಎನ್ನತಕ್ಕ ಬಗ್ಗೆ ವಿಶ್ವವಿದ್ಯಾಲಯ ಪ್ರಯತ್ನ ಮಾಡುತ್ತಿದೆ. ಆದರೆ ಅವರು ತಮ್ಮ ಅಸಹಾಯಕತೆಯನ್ನು ಹೇಳಿ, ಇದು ನಮಗೆ ಕಂಡುಹಿಡಿಯಲಿಕ್ಕೆ ಆಗುತ್ತಿಲ್ಲ ಎನ್ನತಕ್ಕ ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಅದರ ಬಗ್ಗೆ ಈಗಾಗಲೇ ಅವರ ಗಮನಕ್ಕೂ ಕೂಡ ತಂದಿದ್ದೇವೆ. ಸನ್ಮಾನ್ಯ ಸದಸ್ಯರಿಗೆ ಈ ವಿಷಯವನ್ನು ನಾನು ಮತ್ತೊಂದು ಸಾರಿ ತಿಳಿಸುತ್ತಿದ್ದೇವೆ.

ಅಧ್ಯಕ್ಷರು: ಶೃಂಗೇರಿ ಅಡಿಕೆ ಬಹಳ ಉತ್ಕೃಷ್ಟವಾದಂಥ ಅಡಿಕೆ. ತೀರ್ಥಹಳ್ಳಿ ಅಡಿಕೆಗಿಂತಲೂ ಉತ್ತಮವಾದಂಥ ಅಡಿಕೆ. ಆದ್ದರಿಂದ, ಅದರ ಬಗ್ಗೆ ಮಾನ್ಯ ಮಂತ್ರಿಗಳು ಸ್ವಲ್ಪ ಕಳಕಳಿ ವಹಿಸಬೇಕು.

ಪ್ರೊ. ಎಂ.ಡಿ. ನಂಜುಂಡಸ್ವಾಮಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಕೃಷಿ ಮಂತ್ರಿಗಳು ನನ್ನ ಮತ್ತೊಂದು ವಿಷಯಕ್ಕೆ ಸ್ಪಷ್ಟೀಕರಣವನ್ನು ಕೂಡಬೇಕು. ಇಲ್ಲಿ ಮಾನ್ಯ ಕಾನೂನು ಮಂತ್ರಿಗಳೂ ಇದ್ದಾರೆ. ಆದುದರಿಂದ ಈ ಇಬ್ಬರು ಮಂತ್ರಿಗಳೂ ನನ್ನ ಪ್ರಶ್ನೆಗೆ ಉತ್ತರಕೊಡಬೇಕು. ಏಕೆಂದರೆ....

ಅಧ್ಯಕ್ಷರು: ನಿಮ್ಮ ಪ್ರಶ್ನೆಗಳಿಗೆ ಉತ್ತರ ಕೊಡುವುದಕ್ಕೆ ಯಾರ್ಯಾರನ್ನು ಸೇರಿಸಬೇಕು ಹೇಳಿ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ: ಇದು ಮಾನ್ಯ ಕಾನೂನು ಮಂತ್ರಿಗಳಿಗೂ ಸಂಬಂಧಪಡುತ್ತದೆ. ಮತ್ತು ಕೃಷಿ ಮಂತ್ರಿಗಳಿಗೂ ಸಂಬಂಧಪಡುತ್ತದೆ. ಮಾನ್ಯ ಸದಸ್ಯರಾದ ಶಾಮಣ್ಣನವರು ಮಾತನಾಡುವಾಗ ಮನೆಯನ್ನು ಜಪ್ತಿ ಮಾಡುತ್ತಿದ್ದಾರೆ. ಗೋಡೆ ಗಡಿಯಾರ ತೆಗೆದುಕೊಂಡು ಹೋಗಿದ್ದಾರೆಂದು ಹೇಳಿದರು. ನಾನು ತಮಗೆ ಹೇಳುತ್ತಿದ್ದೇನೆ. ಕರ್ನಾಟಕದ ತುಂಬಾ ಈ ಕೆಲಸ ನಡೆಯುತ್ತಿದೆ. ನಮ್ಮ ಮನೆಗಳಲ್ಲಿ ಗೋಡೆ ಗಡಿಯಾರವನ್ನು ಜಪ್ತಿ ಮಾಡುತ್ತಿದ್ದಾರೆ. ರೇಡಿಯೋವನ್ನು ಜಪ್ತಿ ಮಾಡುತ್ತಿದ್ದಾರೆಂದು ಹೇಳುತ್ತಿದ್ದಾರೆ. ಇವೆರಡೂ ಕೃಷಿಗೆ ಅವಶ್ಯಕವಾದ ವಸ್ತುಗಳು; ನಾನು ಕಾನೂನು ಮಂತ್ರಿಗಳಿಗೆ ಏತಕ್ಕೆ ಹೇಳುತ್ತಿದ್ದೇನೆಂದರೆ, ಇವೆರಡೂ ಕೃಷಿಗೆ ಅತಿ ಅವಶ್ಯಕವಾದ ವಸ್ತುಗಳಾಗುತ್ತವೋ, ಇಲ್ಲವೋ? ಗೋಡೆ ಗಡಿಯಾರ ಮತ್ತು ರೇಡಿಯೋಗಳು ಕೃಷಿಗೆ ಅತ್ಯವಶ್ಯಕವಾದ ವಸ್ತುಗಳೆಂದು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ನೀವೇ ರೈತರಿಗಾಗಿ ಕಾರ್ಯಕ್ರಮ ಎಂದು .....

ಅಧ್ಯಕ್ಷರು: ಇದರಲ್ಲಿ ನನ್ನಗೂ ಒಂದು ತಿದ್ದುಪಡಿ ಇದೆ. ದಿನನಿತ್ಯ ಜನರ ಜೀವನಕ್ಕೆ ಈ ಎರಡು ವಸ್ತುಗಳೂ ಅತ್ಯವಶ್ಯಕವಾದುವು.

ಶ್ರೀ ವಾಟಾಳ್ ನಾಗರಾಜ್: ಒಂದೊಂದು ಸಾರಿ ಇದೂ ನಿಂತುಹೋದರೆ ಏನು ಮಾಡುತ್ತೀರಿ?

ಪ್ರೊ. ಎಂ.ಡಿ. ನಂಜುಂಡಸ್ವಾಮಿ: ಇದು ಅವರ ವ್ಯಾಖ್ಯಾನ. ಆದರೆ ಅಧಿಕಾರಿಗಳ ವ್ಯಾಖ್ಯಾನ ಏನೆಂದರೆ, ಇವೆರಡೂ ಕೃಷಿಗೆ ಸಂಬಂಧಪಟ್ಟ ವಸ್ತುಗಳಲ್ಲ ಎಂದು. ರೈತರಿಗೋಸ್ಕರ ಕಾರ್ಯಕ್ರಮ ಎಂದು ರೇಡಿಯೋಗಳಲ್ಲಿ ಹಾಕಿಸುತ್ತೀರಿ. ಇಂಥ ಟೈಂಗೆ ಎಂದು ಹಾಕಿಸುತ್ತೀರಿ. ಆ ಟೈಂನ್ನು ನೋಡಿ ನಾನು ರೇಡಿಯೋವನ್ನು ತಿರುಗಿಸಬೇಕು. ಆದುದರಿಂದ ಇವೆರಡೂ ಕೂಡ ಕೃಷಿಗೆ ಸಂಬಂಧಪಟ್ಟ ಅತ್ಯವಶ್ಯಕ ವಸ್ತುಗಳು. ತಾವು ತಮ್ಮ ಅಧಿಕಾರಿಗಳಿಗೆ ಒಂದು ಆದೇಶವನ್ನು ಕೊಡಬೇಕು. ನಿಮ್ಮ ಅಧಿಕಾರಿಗಳು ನಮ್ಮ ಮನೆಯೊಳಗೆ ಬಂದರೆ ಕಾಲು ಮುರಿಯುತ್ತೇವೆ.

ಅಧ್ಯಕ್ಷರು : ಕಾಲು ಮುರಿಯಬೇಡಿ. ಕಾಲು ಮುರಿದರೆ ಪುನಃ ಕಾನೂನು ನಿಮ್ಮನ್ನು ಅಟ್ಟಿಸಿಕೊಂಡು ಬರುತ್ತದೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಕಾನೂನು ಏನು ಬರುವುದಿಲ್ಲ. Section 107 of IPC says that every citizen has a right for self defence of property.

ಕಾನೂನನ್ನು ಉಲ್ಲಂಘನೆ ಮಾಡಿ ಸಿ.ಪಿ.ಸಿ. 61ನೇ ನಿಯಮದ ಪ್ರಕಾರ ಈ ಎರಡು ಸಾಮಾನುಗಳಿಗೆ ಯಾವನೇ ನ್ಯಾಯಾಧೀಶನೇ ಆಗಲಿ ಕೈ ಹಾಕಿದರೂ ಕೂಡ ಪ್ರಾಣವನ್ನು ತೆಗೆಯುವುದನ್ನು ಬಿಟ್ಟು ಬೇರೆ ಏನು ಬೇಕಾದರೂ ಮಾಡಬಹುದೆಂದು ಕಾನೂನೇ ಹೇಳುತ್ತದೆ.

ಅಧ್ಯಕ್ಷರು : ಈ ಬಗ್ಗೆ ಕಾನೂನು ಸಚಿವರ ವ್ಯಾಖ್ಯಾನ ಏನು ಎಂಬುದನ್ನು ಕೇಳೋಣ.

ಶ್ರೀ ಬಿ. ಶಿವಣ್ಣ : ಇದಕ್ಕೆ ಸರ್ಕಾರೀ ಆದೇಶ ಇದೆ. ಪೋಲೀಸ್ ಅಧಿಕಾರಿಗಳಾಗಲಿ, ಸರ್ಕಾರೀ ಅಧಿಕಾರಿಗಳಾಗಲಿ ಜಪ್ತಿಯನ್ನು ಮಾಡಬಹುದು. ಆದರೆ ಅಲ್ಲಿ ವಯಲೆನ್ಸ್ ಇರಬಾರದು, ಮತ್ತು ಅವರಿಗೆ ತೊಂದರೆ ಆಗಬಾರದು. Otherwise governmnet has got power to interfere with the private rights and personal rights also. ಕಾನೂನನ್ನು ಇಂಪ್ಲಿಮೆಂಟ್ ಮಾಡತಕ್ಕ ಕಾಲದಲ್ಲಿ ಅವರು ಮಾಡಬೇಕು. ಅವರು ಅಪೀಲು ಮಾಡಿಕೊಳ್ಳಬಹುದು. ಆದರೆ ಪ್ರೈವೇಟ್ ಡಿಫೆನ್ಸ್ ಯಾವುದು ಆಗುತ್ತದೆ? ಬಹಳ ಎಮಿನೆಂಟ್ ಆಗಿ ಲೈಸೆನ್ಸ್ ಪಡೆದ ಕಾಲದಲ್ಲಿ ಈ ಮನುಷ್ಯನನ್ನು

ಹೊಡೆಯುತ್ತಿದ್ದಾರೆ, ಕೊಲ್ಲುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂದು, they can attack and have the advantage of private defence. ಆದರೆ ಇದು ಪ್ರೈವೇಟ್ ಡಿಫೆನ್ಸ್‌ಗೆ ಬರುವುದಿಲ್ಲ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಅವರು ಕ್ರಿಮಿನಲ್ ಲಾ ಹೇಳುತ್ತಿದ್ದಾರೆ, ನಾನು ಸಿವಿಲ್ ಲಾ ಹೇಳುತ್ತಿದ್ದೇನೆ.

ಅಧ್ಯಕ್ಷರು : ಅವರೂ ಸಿವಿಲ್ ಲಾವನ್ನೇ ಹೇಳಿದ್ದುದು.

SRI B.SHIVANNA : It cannot be separated.

MR. SPEAKER : Civil and Criminal cannot be separated. They go hand in hand.

ಶ್ರೀ ಕೆ. ಸೋಮಪ್ಪ ಸುವರ್ಣ : ಮಾನ್ಯ ಅಧ್ಯಕ್ಷರೇ ಶರಾಬು ಅಂಗಡಿಗಳನ್ನು ಮಾರಾಟ ಮಾಡತಕ್ಕ, ಏಲಂ ಹಾಕತಕ್ಕ ಪದ್ಧತಿ ಮದ್ರಾಸ್ ಸರ್ಕಾರದಲ್ಲಿತ್ತು. ನಮ್ಮ ಜಿಲ್ಲೆಯಲ್ಲಿ 1968ರಿಂದ 1972ರವರೆಗೆ ಒಂದೊಂದೆ ಅಂಗಡಿಗಳನ್ನು ಏಲಂ ಹಾಕಿ ಬಡವರೂ ಕೂಡ ಇದರಲ್ಲಿ ಭಾಗವಹಿಸುವಂಥ ಸಂದರ್ಭ ಇತ್ತು. ಕರ್ನಾಟಕ ರಾಜ್ಯದ ಕಾನೂನಿನಂತೆ ಇದು ಜಿಲ್ಲಾವಾರು ಆಗುವಂತೆ ಅಭಿಪ್ರಾಯಪಟ್ಟವು. ಈಗ ಸೇಂದಿ ಗಿಡಗಳನ್ನು ನಾವು ತಯಾರು ಮಾಡುತ್ತಿದ್ದೇವೆ. ನಮ್ಮದು ಸೋಷಿಯಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿ ಎಂದು ಹೇಳುವಾಗ ಮದ್ರಾಸ್ ಸರ್ಕಾರದವರು ಮಾಡಿದಂತೆ ತಾಲೂಕುವಾರು, ಜಿಲ್ಲಾವಾರು ಏಲಂ ನಿಲ್ಲಿಸಿ ಅಂಗಡಿವಾರು ಏಲಂ ಮಾಡಿಸಿ. ಒಂದು ವೇಳೆ ಕಾನೂನಿಗೆ ವ್ಯತಿರಿಕ್ತವಾಗಿ ಆಗುವುದಾದರೆ ಮಹಾರಾಷ್ಟ್ರ ಸರ್ಕಾರದವರು, ಮದ್ರಾಸ್ ಸರ್ಕಾರದವರು ಮಾಡುವಂತೆ ಲೈಸೆನ್ಸ್ ಪದ್ಧತಿಯನ್ನು ಮಾಡಿ ಬಡವರೂ ಈ ವ್ಯಾಪಾರವನ್ನು ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಏಕೆಂದರೆ, ಇದು ಕೇವಲ ಕರ್ನಾಟಕದ್ದಾದರೂ ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಬಹಳ ವೈಶಿಷ್ಟ್ಯ ಪೂರ್ಣವಾಗಿದೆ. ಮದ್ರಾಸ್ ಸರ್ಕಾರದ ಕಾನೂನಿಗೆ ಒಳಪಟ್ಟಿದೆ. ಇದೂ ಅಲ್ಲದೆ ಸೃಷ್ಟಿಯಲ್ಲೂ ಕೂಡ ನಮ್ಮದು ಬ್ರಹ್ಮ ಸೃಷ್ಟಿ. ನಿಮ್ಮದು ಬ್ರಹ್ಮ ಸೃಷ್ಟಿ, ನಮ್ಮದು ಪರಶುರಾಮ ಸೃಷ್ಟಿ. ಆದುದರಿಂದ ನನ್ನ ಮಟ್ಟಿಗೆ ಹೇಳುವುದಾದರೆ, ಬಡವರಿಗೆ ಅನುಕೂಲವಾಗುವಂತೆ ಹೋರಾಟ ಮಾಡತಕ್ಕದ್ದು ಅಥವಾ ಲೈಸೆನ್ಸ್ ಪದ್ಧತಿಯನ್ನು ಜಾರಿಗೆ ತರುವುದು ಒಳ್ಳೆಯದೆಂದು ಸರ್ಕಾರದ ಮುಂದೆ ನನ್ನ ಅಭಿಪ್ರಾಯವನ್ನು ಇಡುತ್ತಿದ್ದೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೇ ಕೆ.ಎಂ.ಎಫ್. ಫೆಡರೇಷನ್ ಏನಿದೆ ಅದರ ಬಗ್ಗೆ ನಾನು ಹೋದ ಸಾರಿ ಒಂದು ಪ್ರಶ್ನೆಯನ್ನು ಹಾಕಿದ್ದೆ. ಅದು ಲ್ಯಾಪ್ಸ್‌ಆಯಿತೆಂದು ಕಾಣುತ್ತದೆ. ಆದಕ್ಕೆ ನನಗೆ ಈ ಸಂದರ್ಭ ಕೊಟ್ಟಿರುವುದರಿಂದ ಕೇಳುತ್ತಿದ್ದೇನೆ. ಗುಲ್ಬರ್ಗಾ ಬೀದರ್ ಸೇರಿ ಒಂದು ಯೂನಿಯನ್ ಮಾಡಿದ್ದಾರೆ. ಅದರಲ್ಲಿ ಏನಾಗಿದೆ ಎಂದರೆ 40 ಸಾವಿರ ಲೀಟರ್ ಬೀದರ್ ನಿಂದ ಹಾಲು ಬರುತ್ತದೆ, 6 ಸಾವಿರ ಲೀಟರ್ ಗುಲ್ಬರ್ಗಾದಿಂದ ಬರುತ್ತದೆ. ಆದರೂ ಕೂಡ ಬೀದರ್ ಸಪರೇಟ್ ಮಾಡಿ ಎಂದು ಬೇಕಾದಷ್ಟು ಪ್ರಯತ್ನ ಮಾಡಿದರೂ ಕೂಡಾ ಇವತ್ತಿಗೂ ಬೀದರ್‌ನ್ನು ಸಪರೇಟ್ ಮಾಡಲಿಲ್ಲ. ಗುಲ್ಬರ್ಗಾ ಆರು ಸಾವಿರ ಲೀಟರ್ ಇದ್ದುದನ್ನು ಅಲ್ಲಿಯೇ ಇಡುತ್ತಾರೆಯೇ ಹೊರತು ಇಲ್ಲಿ ಬೀದರ್ 40 ಸಾವಿರ ಕೊಟ್ಟರೂ ಸಪರೇಟ್ ಮಾಡುವ ಪ್ರಯತ್ನ ಮಾಡುತ್ತಿಲ್ಲ. ಇದು ಏತಕ್ಕೆ? ಸಪರೇಟ್ ಮಾಡತಕ್ಕಂಥ ಏನಾದರೂ ಯೋಚನೆ ಇದೆಯೇ? ಇದ್ದರೆ ಯಾವಾಗ ಮಾಡುತ್ತೀರಿ ಎನ್ನುವ ಒಂದು ಪ್ರಶ್ನೆ. ಇನ್ನೊಂದು ಸಾಲ ಮನ್ನಾ ಬಗ್ಗೆ.

ಅಧ್ಯಕ್ಷರು : ಅದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಲು ಸಮಗ್ರವಾದಂಥ ಒಂದು ಹೇಳಿಕೆಯನ್ನು ಮಾಡುತ್ತೇವೆಂದು ಬಜೆಟ್ ಸ್ಪೀಚ್‌ನಲ್ಲಿ ಹೇಳಿದ್ದಾರೆ. ಈಗತಾನೆ ಮಾನ್ಯ ಕಂದಾಯ ಮಂತ್ರಿಗಳು ಹೇಳಿದರು. ಅವರು ಮಾಡುತ್ತಾರೆ ನೀವು ಅಲ್ಲಿಗೆ ಸೀಮಿತಮಾಡಿಕೊಳ್ಳಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ತಮ್ಮ ಹೇಳಿಕೆಯನ್ನು ಕೊಟ್ಟು ತೊಂದರೆಯನ್ನು ತಪ್ಪಿಸಿದರೆ ಸಾಕು. ಬಹಳ ಸಂತೋಷ, ಮಾನ್ಯ ಪ್ರೊಫೇಸರ್ ನಂಜುಂಡಸ್ವಾಮಿಯವರು ಸಿವಿಲ್ ಬೇರೆ ಕ್ರಿಮಿನಲ್ ಬೇರೆ ಎಂದು ಹೇಳಿದರು. ಎರಡೂ ಬೇಡ, ಅದು ಸರಿಯಲ್ಲ ಏನೋ ಒಂದು ದಾರಿಗೆ ಹಚ್ಚಿಕೊಟ್ಟರೆ ಸಾಕು.

ಶ್ರೀ ವಾಟಾಳ್ ನಾಗರಾಜ್ : ಸಿವಿಲ್, ಕ್ರಿಮಿನಲ್ ಎಂದರೆ ಬೇರೆ ಅರ್ಥವಾಗುತ್ತದೆ. ಮಾಂಸದ ಊಟ ಕ್ರಿಮಿನಲ್ ಬೇರೆ, ಸಿವಿಲ್ ಎಂದರೆ ಸಸ್ಯಾಹಾರಿ ಎಂದು, ಆ ರೀತಿ ಏನಾದರೂ ಆಗುತ್ತದೆಯೇ? ಅದು ಬದಲಾವಣೆಯಾಗುತ್ತದೆ. ಅದಕ್ಕೋಸ್ಕರ ಹೇಳಿದ್ದುದು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಬೇರೆ ಬೇರೆ ಎಂದು ಹೇಳಿದರಲ್ಲ ಅದಕ್ಕೆ ನಾನು ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಕ್ರಿಮಿನಲ್ ಕೊಡಿಸಿ ಎಂದು ಹೇಳುವ ಒಂದು ಹೊಸ ಪದ ಬಂದಿದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನೀರಿನ ಬಗ್ಗೆ ನಮಗೆ ಬಹಳ ತೊಂದರೆಯಾಗಿದೆ. ಪ್ರತಿವರ್ಷ ಬರಗಾಲ ಬೀಳುತ್ತಿದೆ. ಅದಕ್ಕೆ ಮಾನ್ಯ ಖಿರ್ಗೆ ಸಾಹೇಬರು ಏನಾದರೂ ಒಂದು ಲಿಸ್ಟ್ ಕೊಡಿ ಎಂದು ಹೇಳಿದ್ದರು. ಅದಕ್ಕೆ ಒಂದು ಪಟ್ಟಿಯನ್ನು ಕೊಟ್ಟಿದ್ದೇವೆ. ಮೊನ್ನೆ ಸೆಕ್ರೆಟರಿಯವರಿಗೂ ಎಷ್ಟು ತೊಂದರೆಯಾಗಿದೆ ಎಂಬುದರ ಬಗ್ಗೆ ಹೇಳಿದ್ದೇವೆ. ಮಿನಿವಾಟರ್ ಸಪ್ಲೈಯಾಗಲಿ ಅಥವಾ ಯಾವುದೇ ರೀತಿ ನೀರಿನ ವ್ಯವಸ್ಥೆಗಾಗಿ ಹೆಚ್ಚಿನ ಹಣವನ್ನು ಖರ್ಚು ಮಾಡುತ್ತೀರಾ ಎನ್ನುವ ಬಗ್ಗೆ ಕೇಳುತ್ತೇನೆ. ತಾತ್ಕಾರ್ತಿಕವಾಗಿ ಮೋಟಾರ್, ಟ್ರಾಕ್ಟರ್ ಬಂಡಿಗಳ ಮೂಲಕ ನೀರನ್ನು ಸರಬರಾಜು ಮಾಡುವುದಕ್ಕಿಂತ ಒಂದು ವಿಶೇಷವಾದ ರಚನಾತ್ಮಕವಾದ ಮಿನಿವಾಟರ್ ಸಪ್ಲೈ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಿದರೆ ಒಳ್ಳೆಯದು. ಹೋದ ಸಾರಿ ಮಾನ್ಯ ಬಸವಲಿಂಗಪ್ಪನವರು ಕಂಬೈನ್ಡ್‌ವಾಟರ್ ಸಪ್ಲೈ ಮಾಡುತ್ತೇವೆಂದು ಹೇಳಿದರು. ಅಂಥದ್ದೇನಾದರೂ ವ್ಯವಸ್ಥೆ ಮಾಡತಕ್ಕಂಥ ಯೋಜನೆ ಇದೆಯೇ. ಇದ್ದರೆ ಬೇಗನೆ ಮಾಡುತ್ತೀರಾ ಎನ್ನುವ ವಿಷಯವನ್ನು ಕೇಳುತ್ತಿದ್ದೇನೆ.

ಇನ್ನೊಂದು ಔರಾದ್ ತಾಲ್ಲೂಕಿನಲ್ಲಿ ಪ್ರೈವೇಟ್ ಕಾಲೇಜ್‌ಗಳ ಬಗ್ಗೆ ಪ್ರಶ್ನೆಯನ್ನು ಕೇಳಿದೆ. ಉತ್ತರ ಸಿಗಲಿಲ್ಲ. ಬರವಣಿಗೆಯಲ್ಲೂ ಕೊಟ್ಟರೆ ಏನೂ ಆಗಲಿಲ್ಲ. ಖಾಸಗೀ ಶಾಲೆಗಳನ್ನು ಕೊಡುತ್ತೀರಾ ಅಥವಾ ಸರ್ಕಾರಿ ಕಾಲೇಜುಗಳನ್ನು ತೆಗೆಯುತ್ತೀರಾ? ಔರಾದ್‌ನಲ್ಲಿ ಒಂದೂ ಇಲ್ಲ. ಇದಕ್ಕೆ ತಮ್ಮಲ್ಲಿ ಏನಾದರೂ ಯೋಚನೆ ಇದೆಯೇ? ಇದ್ದಲ್ಲಿ ಯಾವಾಗ ತೆಗೆದುಕೊಳ್ಳುತ್ತೀರೆನ್ನತಕ್ಕಂಥದ್ದು ಒಂದು ಮಾತು.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ ಸನ್ಮಾನ್ಯ ಶಾಸಕರಾದಂಥ ವಾಟಾಳ್ ನಾಗರಾಜ್‌ರವರು ಬೆಲ್ಲತ್ತ ಜಲಾಶಯ ಕೃಷ್ಣಯ್ಯನಕಟ್ಟೆಯ ಬಗ್ಗೆ ಪ್ರಶ್ನೆಯನ್ನು ಕಳುಹಿಸಿದ್ದೇವೆ, ಈ ಬಗ್ಗೆ ಕೂಡಲೆ ವಿಚಾರ ಮಾಡಿ, ಬಹಳ ತೊಂದರೆ ಇದೆ, ಅದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವ ಬಗ್ಗೆ ಕೇಳಿರುತ್ತಾರೆ. ಇದು ಪತ್ರಿಕೆಯಲ್ಲಿಯೂ ಬಹಳ ವಿವರವಾಗಿ ಬಂದಿದೆ: ಈ ಬಗ್ಗೆ ಕೂಲಂಕುಷವಾಗಿ ತನಿಖೆ ಮಾಡಲಿಕ್ಕೆ ಕೂಡಲೇ ಅಲ್ಲಿಗೆ ಅಧಿಕಾರಿಗಳನ್ನು ಕಳುಹಿಸಿ ವರದಿಯನ್ನು ತರಿಸಿ ಅದನ್ನು ಉಳಿಸಲಿಕ್ಕೆ ಅಥವಾ ಏನಾದರೂ ದುರಸ್ತಿ ಮಾಡಲಿಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ

ಆದನ್ನು ತೆಗೆದುಕೊಳ್ಳುತ್ತೇನೆ. ಆಮೇಲೆ ಮೈಸೂರು ಮಿನರಲ್ಸ್ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಗ್ರಾನೈಟ್ ಕಲ್ಲುಗಳ ಬಗ್ಗೆ ಒಂದು ಮಾತುಕತೆ ಮಾಡುತ್ತೇವೆಂದು ಹೇಳಿದರು. ಆಗ ತಾವು ಈ ಪ್ರಶ್ನೆಯನ್ನು ಎತ್ತಬಹುದು, ಚರ್ಚೆ ಮಾಡಬಹುದು. ಇದನ್ನು ಸನ್ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿದರೆ, ಯೋಗ್ಯವೆಂದು ನಾನು ತಿಳಿದುಕೊಂಡಿರುತ್ತೇನೆ. ಸನ್ಮಾನ್ಯ ಈಶ್ವರಪ್ಪನವರು ಶಿವಮೊಗ್ಗ ಬಸ್ ಸ್ಟಾಂಡ್ ಬಗ್ಗೆ ಒಂದು ಮಾತನ್ನು ಹೇಳಿದರು. ಅದರ ಬಗ್ಗೆ ಸಾರಿಗೆ ಮತ್ತು ಗೃಹ ಮಂತ್ರಿಗಳ ಜೊತೆಯಲ್ಲಿ ಮಾತನಾಡುತ್ತೇನೆ. ಅವರಂತೂ ಮಾರ್ಚ್ 1991ರ ಒಳಗೆ ಮಾಡಿಕೊಡುತ್ತೇನೆಂದು ಹೇಳಿರುವುದು ನನಗಂತೂ ಪರಿಚಯವಿಲ್ಲ. ಆದರೆ ಶಿವಮೊಗ್ಗದಲ್ಲಿ ಬಸ್ ಸ್ಟಾಂಡ್ ಬಗ್ಗೆ ತಾವು ರಸ್ತೆ ರೋಕೋ ಮಾಡುವಷ್ಟು ದೂರಕ್ಕೆ ಬಿಡುವುದಿಲ್ಲ. ಅದಕ್ಕೆ ಕನಿಷ್ಟ ಅವಶ್ಯಕತೆ ಆ ಬಸ್ ಸ್ಟಾಂಡ್‌ನಲ್ಲಿ ಏನನ್ನು ಒದಗಿಸಬೇಕೋ ಅದನ್ನು ಒದಗಿಸಲಿಕ್ಕೆ ಎಲ್ಲಾ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅಕ್ಟೋಬರ್ 1990ರಲ್ಲೇ ಆ ಕೆಲಸವನ್ನು ಮುಗಿಸುತ್ತೇವೆಂದು ಮಾನ್ಯ ಜಾರ್ಜ್ ಅವರು ಉತ್ತರಿಸಿದ್ದರು. ಮೊನ್ನೆ ಮಾರ್ಚ್ 30ರೊಳಗೆ ಮುಗಿಸುತ್ತೇವೆಂದು ಹೇಳಿದ್ದಾರೆ. ಇನ್ನು ಮೂರು ದಿನ ಉಳಿದಿದೆ. ಹೇಗೆ ಮುಗಿಸುತ್ತೀರಿ ?

ಶ್ರೀ ಎಂ ವೀರಪ್ಪ ಮೊಯಿಲಿ : ಕಂಟ್ರಾಕ್ಟರ್ ಜೊತೆ ಡಿಸ್‌ಪ್ಯೂಟ್ ಇದೆ. ಕನಿಷ್ಟ ಅವಶ್ಯಕತೆಗಳನ್ನು ಪೂರೈಸುವುದಕ್ಕೆ ಏನು ಮಾಡಬೇಕೋ ಅದನ್ನು ಮಾಡುತ್ತೇವೆ. ಮಾನ್ಯ ಯಡಿಯೂರಪ್ಪನವರು ಶಿವಮೊಗ್ಗದಲ್ಲಿ ಬರಗಾಲ ಕಾಮಗಾರಿ ತೆಗೆದುಕೊಂಡ ಬಗ್ಗೆ ಹಣ ಪಾವತಿ ಆಗಿಲ್ಲವೆಂದರು. ಆಗ ಕಂದಾಯ ಮಂತ್ರಿಗಳು ಇರಲಿಲ್ಲ. ಪೇಮೆಂಟ್ ಆಗದಿದ್ದರೆ ಪೇಮೆಂಟ್ ಮಾಡಿಸಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬರಗಾಲ ಕಾಮಗಾರಿಗಳನ್ನು ತೆಗೆದುಕೊಂಡಿದ್ದೇವೆ, ಆದರೆ ಪೇಮೆಂಟ್ ಆಗಿಲ್ಲವೆಂದು. ನಾನು ಹೋದಾಗ ಕೂಡ ಹೇಳಿದರು. ಏತಕ್ಕೆ ಆಗಿಲ್ಲವೆಂದು ನಾನು ಡಿ.ಸಿ.ಯವರನ್ನು ಕೇಳಿದೆ. ಡಿ.ಸಿ.ಯವರಿಂದ ಯಾವ ಯಾವ ಕೆಲಸ ತೆಗೆದುಕೊಳ್ಳಬೇಕೆಂದು ಅಪ್ರೂವ್ ಮಾಡಿದ ಕಳುಹಿಸಿದ ಕೆಲಸ ಬಿಟ್ಟು, ಇಂಥ ಕೆಲಸ ತೆಗೆದುಕೊಳ್ಳೋಣವೆಂದು ಅವರೇ ಡಿಸೈಡ್ ಮಾಡಿ.....

ಅಧ್ಯಕ್ಷರು : ಮಾನ್ಯ ಸದಸ್ಯರು ವಿಷಯವನ್ನು ಪ್ರಸ್ತಾಪ ಮಾಡಿ ಹೊರಟು ಹೋಗಿದ್ದಾರೆ. ಅದಕ್ಕೆ ಉತ್ತರಿಸಬೇಕಾಗಿಲ್ಲ. ಉತ್ತರ ಬೇಕಾದವರು ಸದನದಲ್ಲಿ ಇರಬೇಕಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಕೊಪ್ಪಳದ ವಿಷಯ ಎತ್ತಿದ್ದಾರೆ. ಅದು ಕಂದಾಯ ಸಚಿವರಿಗೆ ಸಂಬಂಧಪಟ್ಟದ್ದು. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರಿಸಿದ್ದಾರೆ. ಯಾವ ಜಿಲ್ಲೆಗಳನ್ನೂ ಪುನರ್ವಿಂಗಡಣೆ ಮಾಡುವುದಕ್ಕೆ ಹೋಗುವುದಿಲ್ಲವೆಂದು ಹೇಳಿದ್ದಾರೆ. ಯಾವ ಜಿಲ್ಲೆಗಳನ್ನು ಪುನರ್ವಿಂಗಡಣೆ ಮಾಡುವ ಪ್ರಸ್ತಾವನೆಗೂ ಅಂತಿಮವಾಗಿ ಅಂಕಿತ ಕೊಟ್ಟಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಇದಕ್ಕಾಗಿ 2-3 ಸಮಿತಿಗಳನ್ನು ಮಾಡಿದ್ದೀರಿ. ಒಂದು ಗದಿಗೇಗೌಡರದ್ದು. ಇನ್ನೊಂದು ವಾಸುದೇವರಾವ್ ಅವರದ್ದು. ಹೀಗೆ ಈ ಸಮಿತಿಗಳನ್ನು ಮಾಡಿದ ಉದ್ದೇಶವೇನು? ಸಮಿತಿಗಳನ್ನು ಮಾಡಿ ಅವು ಕೊಟ್ಟ ವರದಿಯ ಆಧಾರದ ಮೇಲೆ ಕ್ರಮ ಕೈಗೊಳ್ಳದಿದ್ದರೆ ಸಮಿತಿಗಳಿಗೆ ಏನು ಗೌರವ ಬರುತ್ತದೆ? ನಮ್ಮ ತಾಲ್ಲೂಕು ಕೂಡ ಜಿಲ್ಲೆ ಆಗುತ್ತದೆಂದು ಆಸೆ ಇಟ್ಟುಕೊಂಡಿದ್ದೆ. ಅದು ಈಗ ತಣ್ಣೀರು ಹಾಕಿದ ಹಾಗೆ ಆಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಯಾವ ತಾಲ್ಲೂಕನ್ನು ಜಿಲ್ಲೆ ಮಾಡುವ ಉದ್ದೇಶ ಇಲ್ಲ. ಒಂದೊಂದು ತಾಲ್ಲೂಕುಗಳನ್ನು ಜಿಲ್ಲೆ ಮಾಡುವುದಕ್ಕಾಗುವುದಿಲ್ಲ. ಇದರ ಬಗ್ಗೆ ಯಾರೂ ಕೂಡ ಆತಂಕಪಡಬೇಕಾಗಿಲ್ಲ. ಮೂರು ಸಮಿತಿಗಳ ವರದಿಗಳು ಏನಿವೆ ಅವು ಕ್ಯಾಬಿನೆಟ್ ಕಮಿಟಿಯ ಮುಂದಿವೆ. ಕ್ಯಾಬಿನೆಟ್ ಸಬ್ ಕಮಿಟಿ ಇನ್ನೂ ನಿರ್ಣಯ ತೆಗೆದುಕೊಂಡಿಲ್ಲ. ವರದಿಗಳು ಮಾತ್ರ ಸರ್ಕಾರದ ಮುಂದಿವೆ. ಇದರ ಬಗ್ಗೆ ಇನ್ನೂ ಯಾವ ನಿರ್ಣಯವನ್ನು ತೆಗೆದುಕೊಂಡಿಲ್ಲ. ಆದ್ದರಿಂದ ಇದರ ಬಗ್ಗೆ ಅಜಿಟೇಷನ್ ಮಾಡತಕ್ಕ ಪ್ರಶ್ನೆ ಇಲ್ಲ. ಯಾವಾಗ ಮಾಡಬೇಕೆಂದರೆ, ಸರ್ಕಾರ ಜಿಲ್ಲೆ ಮಾಡುವುದಕ್ಕೆ ನಿರ್ಣಯ ತೆಗೆದುಕೊಂಡಾಗ ಅಥವಾ ತೆಗೆದುಕೊಳ್ಳುತಕ್ಕ ಹಂತದಲ್ಲಿ ಇಲ್ಲ. ಸರ್ಕಾರ ಸದ್ಯಕ್ಕೆ ವರದಿ ಕೂಡ ಬರಬೇಕಾಗಿದೆ. ಆದುದರಿಂದ ಬೇರೆ ಬೇರೆ ಸಮಸ್ಯೆಗಳು ಇವೆ. ಜಿಲ್ಲೆಗಳನ್ನು ಪುನರ್‌ವಿಂಗಡಣೆ ಮಾಡುವಾಗ ಈಗಾಗಲೇ ಸಮಿತಿಗಳು ಕೊಟ್ಟಿರುವ ವರದಿಗಳನ್ನು ಸಮಾಲೋಚನೆ ಮಾಡಿ ಮಾಡುತ್ತೇವೆ. ತಾವು ಕೂಡ ಸಲಹೆಗಳನ್ನು ಕೊಡಬಹುದು. ಸಾರ್ವಜನಿಕರ ಸಲಹೆಗಳನ್ನು ಸಹ ಕ್ಯಾಬಿನೆಟ್ ಸಬ್ ಕಮಿಟಿ ತೆಗೆದುಕೊಳ್ಳಬಹುದು. ಅದಕ್ಕೇನು ಅವಸರ ಇಲ್ಲ. ದಯಮಾಡಿ ಕೊಪ್ಪಳದವರಿಗೆ ಹೇಳಿ. ಯಾವುದೇ ಪ್ರಶ್ನೆ ಇಲ್ಲದಿರುವಾಗ ತಾವು ಅಜಿಟೇಷನ್ ಮಾಡತಕ್ಕ ಅವಶ್ಯಕತೆ ಇಲ್ಲ. ಕೊಪ್ಪಳವಾಗಲಿ-ಯಾವುದೇ ಆಗಲಿ ಜಿಲ್ಲೆಗಳನ್ನು ಮಾಡುವ ಮೊದಲು ಕೂಲಂಕುಷವಾಗಿ ಪರಿಶೀಲನೆ ಮಾಡುತ್ತೇವೆ. ಇಲ್ಲಿಯವರೆಗೆ ಯಾವುದೇ ಹೊಸ ಜಿಲ್ಲೆ ಮಾಡುವ ಬಗ್ಗೆ ನಿರ್ಣಯ ತೆಗೆದುಕೊಂಡಿಲ್ಲ.

ಶ್ರೀ ಮಲ್ಲಿಕಾರ್ಜುನ ಬಸಪ್ಪ ದಿವಟರ್ : ಕೊಪ್ಪಳದಲ್ಲಿ 27 ದಿನಗಳಿಂದ ಸರದಿ ಉಪವಾಸ ಸತ್ಯಾಗ್ರಹ ನಡೆದಿದೆ. ಹಳ್ಳಿಗಳಲ್ಲಿ ಕರ ಕೊಡಬೇಡಿ ಎಂದು ಹೇಳುತ್ತಿದ್ದಾರೆ. ಮುಂದೆ ಬರುವ ಲೋಕಸಭಾ ಚುನಾವಣೆಯನ್ನು ಬಹಿಷ್ಕಾರ ಮಾಡಿ ಎಂದು ಹೇಳುತ್ತಿದ್ದಾರೆ ಗಂಗಾವತಿ, ಕುಷ್ಟಗಿ, ಯಲಬುರ್ಗದಲ್ಲಿ ಕೂಡ ಚಳುವಳಿ ಪ್ರಾರಂಭವಾಗುತ್ತದೆ. ಮುಂದೆ ಗಂಭೀರ ಸ್ವರೂಪ ತಾಳುವುದರಿಂದ ಇದನ್ನು ನಿಲ್ಲಿಸುವುದಕ್ಕೆ ಸರ್ಕಾರದವರು ಯೋಗ್ಯ ಕ್ರಮ ತೆಗೆದುಕೊಳ್ಳಬೇಕು.

**10.40 ಎ.ಎಂ.**

ಇಲ್ಲದೇ ಇದ್ದರೆ ಪರಿಸ್ಥಿತಿ ಗಂಭೀರವಾಗಿ ನಾಳೆ ಕಾನೂನಿನ ಪ್ರಶ್ನೆ ಬರುತ್ತದೆ. ಅದಕ್ಕೆ ನಾನು ಸರ್ಕಾರವನ್ನು ಕೇಳುವುದೇನೆಂದರೆ ಜಿಲ್ಲೆ ಮಾಡುವಾಗ ಗದ್ದೀಗೌಡರ ವರದಿ ಪ್ರಕಾರ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟರೆ ಸಾಕು. ಅದರಲ್ಲಿ ಕೊಪ್ಪಳ ಜಿಲ್ಲೆ ಇದೆ. ಸಬ್ ಕಮಿಟಿಯವರು ನಾಲ್ಕು ಜಿಲ್ಲೆಗಳನ್ನು ಮಾಡುತ್ತಾರೆಂದು ಕಂದಾಯ ಸಚಿವರು ಹೇಳಿಕೆ ಕೊಟ್ಟಿದ್ದಾರೆ. ನಾಲ್ಕು ಜಿಲ್ಲೆಗಳನ್ನು ಮಾಡಬೇಕೆಂದು ಸಬ್ ಕಮಿಟಿ ರಿಪೋರ್ಟ್ ಇದೆ ಎಂದು ಹೇಳಿದ್ದಾರೆ. ಆದರೆ ತೀರ್ಮಾನ ತೆಗೆದುಕೊಂಡಿಲ್ಲ. ಕೊಪ್ಪಳದಲ್ಲಿ ಜನರಿಗೆ ನಮ್ಮ ಹಕ್ಕು ಹೊರಟು ಹೋಗುತ್ತದೆ ಎಂದು ಸಂಶಯ ಬಂದಿದೆ....

ಅಧ್ಯಕ್ಷರು : ಇನ್ನೂ ತೀರ್ಮಾನವನ್ನೇ ಮಾಡಿಲ್ಲ ಎಂದು ಸರ್ಕಾರದವರು ಹೇಳುವಾಗ ಹಕ್ಕು ಎಲ್ಲಿ ಹೋಗುತ್ತದೆ?

ಶ್ರೀ ಎಂ. ವೀರಪ್ಪ ಮೊಯಿಲಿ: ಸಬ್ ಕಮಿಟಿಯಲ್ಲಿ ಕೊಪ್ಪಳ ಜಿಲ್ಲೆ ಮಾಡಬೇಕೆಂದು ಇದೆ. ಮುಂದೆ ಹೊಸದಾಗಿ ಜಿಲ್ಲೆಗಳನ್ನು ಮಾಡುವಾಗ ಕೊಪ್ಪಳ ಜಿಲ್ಲೆಯ ಪ್ರಸ್ತಾವನೆಯನ್ನು ಕೂಡ ಬಾಕಿ ಜಿಲ್ಲೆಗಳ ಪ್ರಸ್ತಾವನೆ ಜೊತೆಯಲ್ಲಿ ತೆಗೆದುಕೊಳ್ಳುತ್ತೇವೆ. ಆದ್ದರಿಂದ ಸುಮ್ಮನೆ ಊಹಾಪೋಹಗಳ ಮೇಲೆ ಸೌಧ ಕಟ್ಟುವುದಕ್ಕೆ ಯಾರೂ ಹೋಗುವುದು ಬೇಡ. ಮುಖ್ಯ ಮಂತ್ರಿಗಳು ಹೇಳುತ್ತಿದ್ದಾರೆ, ನಾವು ಪುನರುಚ್ಚಾರ ಮಾಡುತ್ತಿದ್ದೇವೆ. ಕ್ಯಾಬಿನೆಟ್ ಸಬ್ ಕಮಿಟಿ ನಿರ್ಣಯ ತೆಗೆದುಕೊಂಡಿಲ್ಲ.

ಮುಂದೆ ಮಾಡುವಾಗ ಈ ವರದಿಗಳನ್ನು ಪರಿಶೀಲನೆ ಮಾಡಿ ಶಾಸಕರ ಜೊತೆಯಲ್ಲಿ ಕೂಡ ಸಮಾಲೋಚನೆ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಸಚಿವ ಸಂಪುಟದ ಉಪಸಮಿತಿ ಸಭೆ ಸೇರಿದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ : ಸೇರಿದೆ. ಸಾಕಷ್ಟು ಚರ್ಚೆಯಾಗಿದೆ.

ಶ್ರೀ ಬಿ.ಎಚ್. ಬನ್ನಿಕೋಡ್ : ಧಾರವಾಡದಲ್ಲಿ ಹಾವೇರಿ ಜಿಲ್ಲೆ ಮಾಡುವುದಿಲ್ಲ ಎಂದು ಕೇಳಿದ್ದೇನೆ. ಗದಗ್ ಮಾತ್ರ ಮಾಡುತ್ತಾರಂತೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಒಂದು ಮಾತು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮುಖ್ಯಮಂತ್ರಿಗಳೂ ಅದನ್ನು ಹೇಳಿದ್ದಾರೆ. ಹಾವೇರಿ ಜಿಲ್ಲೆಯಾಗಲೀ, ಕೊಪ್ಪಳ ಜಿಲ್ಲೆಯಾಗಲೀ, ಯಾದಗಿರಿ, ಚಾಮರಾಜನಗರ, ಉಡುಪಿ ಅಥವಾ ಗದಗ್ ಜಿಲ್ಲೆಯಾಗಲೀ ಏನೇನು ಜಿಲ್ಲೆಯಾಗಬೇಕೆಂದು ಪ್ರಸ್ತಾವನೆ ಇದೆಯೋ all these proposals will be treated on equal footing by the Cabinet Sub-Committee on merits, and take appropriate decision at appropriate time.

ಶ್ರೀ ರಂಗದೇವರಾಯಲು : ಅಲ್ಲಿ ಸತ್ಯಾಗ್ರಹ ಕುಳಿತಿದ್ದಾರೆ. ನಮ್ಮ ಕಂದಾಯ ಮಂತ್ರಿಗಳು ಯಾವುದೂ ತೀರ್ಮಾನ ಮಾಡಿಲ್ಲ. ಸತ್ಯಾಗ್ರಹ ವಾಪಸ್ ತೆಗೆದುಕೊಳ್ಳಿ ಎಂದು ಆದೇಶ ಕೊಟ್ಟು ವಾಪಸ್ ತೆಗೆಸಿದರೆ ಒಳ್ಳೆಯದಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, ಈಗಾಗಲೇ ಇದರ ಬಗ್ಗೆ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅವರು ಅಪೀಲ್ ಮಾಡಿದ್ದಾರೆ. ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ವೀರಪ್ಪ ಮೊಯಿಲಿ ಅವರು ನಾನು ಏನು ಹೇಳಬೇಕಾಗಿತ್ತೋ ಅದನ್ನೇ ಹೇಳಿದ್ದಾರೆ. ಪುನಃ ಅದನ್ನೇ ನಾನು ಹೇಳಬೇಕಾಗಿಲ್ಲ. ಮೊನ್ನೆ ಟಿಲಿಗ್ರಾಂ ಕಳುಹಿಸು ಎಂದು ಹೇಳಿದಾಗ ಹೇಳಿದ್ದೇನೆ. ಯಾವುದೂ ಫೈನಲೈಸ್ ಆಗಿಲ್ಲ. ಸಬ್ ಕಮಿಟಿ ರಿಪೋರ್ಟ್‌ನ್ನು ಸಂಪೂರ್ಣವಾಗಿ ಇನ್ನೂ ಕ್ಯಾಬಿನೆಟ್‌ಗೂ ಸಲ್ಲಿಸಿಲ್ಲ. ಈ ದಿಸೆಯಲ್ಲಿ ಯಾವ ತಾಲ್ಲೂಕು ಯಾವ ಜಿಲ್ಲೆಯಲ್ಲಿ ಹೋಗುತ್ತದೆ ಎಂಬ ಬಗ್ಗೆ ಸಂಪೂರ್ಣವಾಗಿ ಫೈನಲ್ ಕ್ಯಾಬಿನೆಟ್ ಡಿಸಿಷನ್ ಇಲ್ಲದ ಕಾರಣ ಈ ಹಂತದಲ್ಲಿ ಸತ್ಯಾಗ್ರಹ ಮಾಡುವ ಅವಶ್ಯಕತೆಯೇ ಇಲ್ಲ. ಅವರು ಕೈಬಿಡಬೇಕು. ಅದಕ್ಕೆ ಈ ಮನೆ ಮುಖಾಂತರ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಅವರು ಸುಮ್ಮನೆ ಸರದಿ ಉಪವಾಸ ಮಾಡತಕ್ಕದ್ದು ಅಥವಾ ಗಲಾಟೆ ಮಾಡಿಸತಕ್ಕದ್ದು ಯಾವುದೂ ಕೂಡ ಮಾಡಬಾರದು. ಫೈನಲ್ ರಿಪೋರ್ಟ್ ಕ್ಯಾಬಿನೆಟ್‌ನದು ಬಂದ ಮೇಲೆ ಬೇಕಾದರೆ ಅನ್ಯಾಯವಾಗಿದೆ ಎಂದರೆ ನಾನು ಒಪ್ಪುತ್ತೇನೆ. ಇನ್ನೂ ಯಾವ ನಿರ್ಣಯವನ್ನೇ ತೆಗೆದುಕೊಂಡಿಲ್ಲ, ಅದಕ್ಕಿಂತ ಮುಂಚೆ ಪ್ರೆಷರೈಸ್ ಮಾಡುವುದಕ್ಕೆ ಈ ರೀತಿ ಮಾಡಿದರೆ ಸರ್ಕಾರಕ್ಕೆ ಸ್ವಲ್ಪ ಕಷ್ಟವಾಗುತ್ತದೆ. ಅದಕ್ಕಾಗಿ ಮನವಿ ಮಾಡಿಕೊಳ್ಳುತ್ತೇನೆ ಅವರು ಮುಂದೆ ನಿರ್ಣಯ ಏನು ಬರುತ್ತದೆ ಅದರ ಮೇಲೆ ಬೇಕಾದರೆ ಅಪಿಟೇಷನ್ ಮಾಡಲಿ ಅಥವಾ ಪುನಃ ಮನವಿ ಮಾಡಲಿ, ಯಾವ ರೀತಿಯಾಗಿ ನ್ಯಾಯವಾದ ಬೇಡಿಕೆ ಇರುತ್ತದೆಯೋ ಅದನ್ನು ಮಾಡಿಕೊಂಡು ಹೋಗಲಿ. ಆದರೆ ಈ ಸಂದರ್ಭದಲ್ಲಿ ಈ ಹಂತದಲ್ಲಿ ಅವರು ಅಪಿಟೇಷನ್ ವಾಪಸ್ ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ವೀರಪ್ಪ ಮೊಯಿಲಿ : ಶ್ರೀಮಾನ್ ಬನ್ನಿಕೋಡ್ ಅವರು ಹಾಗೂ ಇತರ ಸದಸ್ಯರು ಈ ಬಗ್ಗೆ ಹೇಳಿದ್ದಾರೆ. ಈ ಬಗ್ಗೆ ನಾವು ಈಗಾಗಲೇ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಕರ್ನಾಟಕ ವಿಶ್ವವಿದ್ಯಾನಿಲಯದ ಉಪಕುಲಪತಿಯವರ ಜೊತೆ ನಾನು

ಮಾತನಾಡಿದ್ದೇನೆ. ಅನುಮತಿ ಕೊಡುವುದಕ್ಕೆ ಏನೂ ತೊಂದರೆ ಇಲ್ಲ ಮತ್ತು ಸರ್ಕಾರದಿಂದ ಈ ಬಗ್ಗೆ ಆದೇಶ ಕೊಡುತ್ತಿದ್ದೇವೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಏನೂ ಪ್ರಯೋಜನ ಆಗಿಲ್ಲ. ವಿದ್ಯಾರ್ಥಿಗಳಿಂದ ಅರ್ಜಿ ತುಂಬಿಸಿಕೊಂಡಿಲ್ಲ. ಪರೀಕ್ಷೆ ಕೊಡುವುದಿಲ್ಲ ಎಂದು ಹೇಳುತ್ತಿದ್ದಾರೆ. ಸರ್ಕಾರದ ಸುತ್ತೋಲೆಯನ್ನು ಕೂಡಾ ಅವರು ಲಕ್ಷಕ್ಕೆ ತೆಗೆದುಕೊಂಡಿಲ್ಲ.

ಅಧ್ಯಕ್ಷರು : ವಿಶ್ವವಿದ್ಯಾನಿಲಯದ ಸ್ವಾಯತ್ತತೆ ಬಗ್ಗೆಯೂ ನೋಡಬೇಕಾಗುತ್ತದೆ. ಸುತ್ತೋಲೆ ಕಳುಹಿಸಿದ ಮಾತ್ರಕ್ಕೆ ಮಾಡಬೇಕೆಂದೇನೂ ಇಲ್ಲ. ನೀವೇ ಎರಡನ್ನೂ ಹೇಳುತ್ತೀರಿ. ಒಂದು ಕಡೆ ಸ್ವಾಯತ್ತತೆ ಕಾಪಾಡಬೇಕೆಂದೂ, ಇನ್ನೊಂದು ಕಡೆ ಸುತ್ತೋಲೆ ಕೊಡಿ, ಆದೇಶ ಕೊಡಿ ಎಂದು ಹೇಳುತ್ತೀರಿ. ಏನೇ ಆಗಲೀ ಅಲ್ಲಿನ ವೈಸ್ ಛಾನ್ಸಲರ್‌ರವರ ಜೊತೆ ಮಾತನಾಡಿದ್ದೇವೆಂದು ಮಂತ್ರಿಗಳು ಹೇಳಿದ್ದಾರೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಸರ್ಕಾರ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಆ ವಿದ್ಯಾರ್ಥಿಗಳಿಗೆ ಯಾವ ತೊಂದರೆಯೂ ಆಗದ ಹಾಗೆ ನಾವು ನೋಡಿಕೊಳ್ಳುತ್ತೇವೆ. ದಯವಿಟ್ಟು ನಿಶ್ಚಿಂತೆಯಿಂದಿರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಇಡೀ ರಾಜ್ಯದಲ್ಲಿ ಮಾಡಿರುವಂತೆ ಬರಗಾಲ ಕಾಮಗಾರಿ ಬಗ್ಗೆ ಶಿಕಾರಿಪುರ ತಾಲ್ಲೂಕಿನಲ್ಲೂ ಒಂದು ಸಮಿತಿ ಮಾಡಿದ್ದಾರೆ. ಅಸಿಸ್ಟೆಂಟ್ ಕಮಿಷನರ್‌ರವರ ಅಧ್ಯಕ್ಷತೆಯಲ್ಲಿ ನಿಶ್ಚಯ ಆದಂತೆ ಎಲ್ಲಿ ಎಲ್ಲಿ ಬರಗಾಲ ಇದೆ ಅಲ್ಲಿ ಕೆಲಸ ನಡೆದಿದೆ. ಅದು ನಾನು ಮಾಡಿದ ತೀರ್ಮಾನ ಅಲ್ಲ. ಬರಗಾಲ ಪ್ರದೇಶ ಗುರ್ತಿಸುವ ಕೆಲಸ ಜವಾಬ್ದಾರಿಯಿಂದ ತೆಗೆದುಕೊಂಡ ತೀರ್ಮಾನ. ಮಾನ್ಯ ಕಂದಾಯ ಮಂತ್ರಿಗಳು ಶಿವಮೊಗ್ಗಕ್ಕೆ ಬಂದಾಗ ಚರ್ಚೆಯಾಗಿ ಏನು ಕೆಲಸ ಆಗಿದೆ ಎನ್ನುವ ಬಗ್ಗೆ ಪಟ್ಟಿ ತರಿಸಿ ಇರುವುದಕ್ಕೆ ಪೇಮೆಂಟ್ ಮಾಡಿ, ಹೊಸದಾಗಿ ಎಷ್ಟು ಕೆಲಸ ತೆಗೆದುಕೊಳ್ಳಬೇಕೋ ಅದನ್ನು ತೆಗೆದು ಮಾಡಿಸಿಕೊಡುತ್ತೇನ್ನುವ ಭರವಸೆಯನ್ನು ಕೊಟ್ಟಿದ್ದರು. ಕಾನೂನು ಚೌಕಟ್ಟಿನಲ್ಲಿ, ಅಸಿಸ್ಟೆಂಟ್ ಕಮೀಷನ್‌ರವರ ಅಧ್ಯಕ್ಷತೆಯಲ್ಲಿ ಕೆಲಸ ಆಗಿದ್ದರೆ ಆ ಕೆಲಸಗಳಿಗೆ ಪೇಮೆಂಟ್ ಮಾಡುವ ವ್ಯವಸ್ಥೆ ಮಾಡಿಸುತ್ತಾರೆಯೇ ಎಂದು ಕಂದಾಯ ಮಂತ್ರಿಗಳನ್ನು ಕೇಳುತ್ತೇನೆ. ಹಣಕಾಸಿನ ಪರಿಸ್ಥಿತಿ ನೋಡಿ ಮುಂದೆ ಯಾವ ರೀತಿ ಕೆಲಸ ತೆಗೆದುಕೊಳ್ಳುತ್ತೀರಿ? ಹಣ ಬಿಡುಗಡೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಡಿ.ಸಿ.ಯವರು ಯಾವ ಕೆಲಸಗಳನ್ನು ಅಪ್ರೂವ್ ಮಾಡಿದ್ದಾರೆ ಅಥವಾ ತಾಲ್ಲೂಕು ಪಂಚಾಯಿತಿ ಸಮಿತಿಯಲ್ಲಿ ತೆಗೆದುಕೊಂಡ ಕೆಲಸ ಡಿ.ಸಿ. ಅಪ್ರೂವ್ ಮಾಡಿದ್ದರೆ ಆ ಕೆಲಸಕ್ಕೆ ಹಣ ಬಿಡುಗಡೆ ಮಾಡುತ್ತೇವೆ ಮತ್ತು ಹಂತ ಹಂತವಾಗಿ ನಾವು ಹಣವನ್ನು ಬಿಡುಗಡೆ ಮಾಡುತ್ತಿದ್ದೇವೆ. ಉಳಿದದ್ದು ಡಿ.ಸಿ.ಯವರು ಆದೇಶ ಕೊಟ್ಟಿದ್ದು, ಎಲ್ಲಿ ಅವರ ಆದೇಶದ ಪ್ರಕಾರ ಕೆಲಸ ನಡೆದಿರುತ್ತದೆ ಅದಕ್ಕೆ ಹಣ ಕೊಡಬೇಕಾಗುತ್ತದೆ.

ಶ್ರೀ ಎಂ. ಸಿದ್ದಮಾದಯ್ಯ : ಮಾನ್ಯ ಅಧ್ಯಕ್ಷರೇ ಕೊಳ್ಳೆಗಾಲದ ಆಸ್ಪತ್ರೆಯಲ್ಲಿ ಸರಿಯಾದ ಸಲಕರಣೆಗಳು ಇಲ್ಲದೇ ಅಲ್ಲಿಗೆ ಬರುವ ಸುಮಾರು 700-800 ರೋಗಿಗಳಿಗೆ ಬಹಳ ತೊಂದರೆಯಾಗಿದೆ. ಮತ್ತು ಅಲ್ಲಿಗೆ ಹೆರಿಗೆಗಾಗಿ ಹೆಚ್ಚು ಜನರು ಬರುವುದರಿಂದ ಒಬ್ಬ ಲೇಡಿ ಡಾಕ್ಟರ್ ಅವಶ್ಯಕತೆ ಇದೆ. ದಯಮಾಡಿ ಆರೋಗ್ಯ ಮಂತ್ರಿಗಳು ಈ ಬಗ್ಗೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ : ಗ್ರಾಮೀಣ ಅಭಿವೃದ್ಧಿ ಸಚಿವರು ಹೊರಗಡೆ ಹೋಗುತ್ತಿದ್ದಾರೆ. ಅವರ ಗಮನಕ್ಕೆ ಒಂದು ವಿಚಾರ ತರಬೇಕಾಗಿದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಅಧ್ಯಕ್ಷರೇ ನನ್ನ ವಿಷಯ ಏನಾಯಿತು? ಬೀದರ್‌ನಲ್ಲಿ ಹಾಲು ಉತ್ಪಾದನೆ ....

ಅಧ್ಯಕ್ಷರು : ಬೀದರ್, ಗುಲ್ಬರ್ಗಾದಲ್ಲಿನ ಹಾಲು ಉತ್ಪಾದನೆ ವಿಷಯ ಏನಾಯಿತು?

ಶ್ರೀ ಬಿ. ಬಸವಲಿಂಗಪ್ಪ : ಈ ವಿಚಾರ ಸುಮಾರು ಒಂದು ವರ್ಷದಿಂದ ನೆನೆಗುದಿಗೆ ಬಿದ್ದಿದೆ. ಗುಲ್ಬರ್ಗಾದಲ್ಲಿ ಹಾಲು ಕಡಿಮೆ ಉತ್ಪಾದನೆಯಾಗುತ್ತಿದೆ. ಇವೆರಡೂ ಪ್ರದೇಶಗಳು ದೊಡ್ಡದಿವೆ. ಬೀದರ್‌ನಲ್ಲಿ ಈ ಕಾರ್ಯಕ್ರಮ ನಡೆಯುತ್ತಿದೆ. ಅಲ್ಲಿ ಹೆಣ್ಣು ಮಕ್ಕಳೇ ಸಹಕಾರ ಸಂಘ ಮಾಡಿಕೊಂಡು ಹೆಣ್ಣು ಮಕ್ಕಳೇ ಅಲ್ಲಿ ಈ ಬಗ್ಗೆ ಮುಂದೆ ಬಂದು ಮಾಡುತ್ತಿದ್ದಾರೆ. ಅಲ್ಲಿಯೂ ಕೂಡ ಏನು ವ್ಯವಸ್ಥೆ ಮಾಡಬೇಕೋ ಅದನ್ನು ಮಾಡಬೇಕು. ಹಾಗೂ ಇಲ್ಲಿಯ ವ್ಯವಸ್ಥೆಯನ್ನು ಅಲ್ಲೂ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಆದರೆ ಇಲ್ಲಿ, ಗುಲ್ಬರ್ಗಾದಲ್ಲಿ ಉತ್ಪತ್ತಿ ಕಡಿಮೆಯಾಗಿದೆ. ಇಲ್ಲಿರುವ ಪ್ಲಾಂಟೂ ನಡೆಯಬೇಕು ಹಾಗೂ ಅಲ್ಲಿರುವ ಪ್ಲಾಂಟೂ ನಡೆಯಬೇಕು. ನೀವು ಪ್ರಾರಂಭ ಮಾಡಿ. ನಿಮಗೆ ನಮ್ಮ ಸಹಕಾರ ಇರುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಾವು ಅರ್ಜಿ ಕೊಟ್ಟಿದ್ದೇವೆ. ನಾವು ಏನು ಮಾಡುವುದು? ನೀವು ಮಾಡಬೇಕು. ನಾನು ಹೇಳಿದ್ದೇನೆ. ನೀವೂ ಕೂಡ ಪ್ರಯತ್ನ ಮಾಡುವುದು ಒಳ್ಳೆಯದು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಮ್ಮ ಕಡೆ ಏನು ಇದೆ ನೀವು ಮಾಡಬೇಕು.

ಶ್ರೀ ಬಿ. ಬಸವಲಿಂಗಪ್ಪ : ನಾನು ಮಾಡುತ್ತಿದ್ದೇನೆ.

**ಕೋಲಾರ ಜಿಲ್ಲೆಯಲ್ಲಿ ಕುಡಿಯುವ ನೀರಿನ ಅಭಾವ.**

ಶ್ರೀ ಸಿ. ಬೈರೇಗೌಡ : ಕುಡಿಯುವ ನೀರಿನ ಬಗ್ಗೆ ಸದನದಲ್ಲಿ ಬಹಳ ಚರ್ಚೆಯಾಗಿದೆ. ಆದರೆ ಅದರ ಪ್ರತಿಫಲ ಸಿಗುತ್ತಿಲ್ಲವೆಂದು ವಿಷಾದದಿಂದ ಹೇಳಬೇಕಾಗುತ್ತದೆ. ಶನಿವಾರದ ದಿವಸ ನಮ್ಮ ಕೋಲಾರ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ ಸಭೆ ನಡೆದು ಪ್ರಾಮುಖ್ಯವಾಗಿ ಎರಡು ಗಂಟೆಯವರೆಗೆ ಚರ್ಚೆಯಾಯಿತು. ವಿರೋಧ ಪಕ್ಷದ ಸದಸ್ಯರೂ ಕೂಡ ಆವತ್ತಿನ ದಿವಸ ಸಭೆಯಲ್ಲಿ ಭಾಗವಹಿಸಿದ್ದೆವು. ಕೊಳವೆ ಬಾವಿಗಳನ್ನು ಹಾಕಿಸುವ ಕಾರ್ಯಕ್ರಮವನ್ನು ಮಾತ್ರ ಮುಂದಿಟ್ಟು ಬಾಕಿ ಎಲ್ಲಾ ವಿಚಾರವನ್ನು ಬದಿಗಿಟ್ಟು ಚರ್ಚೆ ಮಾಡಿದೆವು. ಅದನ್ನು ಚರ್ಚೆ ಮಾಡಿದ ಸಂದರ್ಭದಲ್ಲಿ ಆದಂಥಾದ್ದು ಏನು ಎಂದರೆ ಕೆಲವು ಕಡೆ ವರ್ಷದ ಪ್ರಾರಂಭದಲ್ಲಿ ಮತೀಯ ಗಲಭೆಗಳು ಪ್ರಾರಂಭವಾಯಿತು. ಆ ಕಾರಣದಿಂದ ತಕ್ಷಣ ಕೊಳವೆ ಬಾವಿಗಳನ್ನು ಹಾಕತಕ್ಕಂಥಾದ್ದು ಆಗಲಿಲ್ಲ. ನಂತರ ಡೀಸೆಲ್ ಕೊರತೆ ಪ್ರಾರಂಭವಾಯಿತು. ಆಗ ಕೆಲಸ ಬಂದಾಯಿತು. ಅದಾದ ಮೇಲೆ ಕೆಲವು ಕಡೆ ಸಿಮೆಂಟ್ ಸಿಗಲಿಲ್ಲ. ಕೆಲಸ ಕುಂಠಿತವಾಯಿತು. ಈಗ ಇದೆಲ್ಲ ಆದ ಮೇಲೆ ಡೀಸೆಲ್ ಬೆಲೆ ಜಾಸ್ತಿಯಾಯಿತು. ಎಂಬ ಕಾರಣಕ್ಕೋಸ್ಕರ ರಿಗ್ ಇರತಕ್ಕಂತಹವರು ಕೊಳವೆ ಬಾವಿಗಳನ್ನು ಹಾಕುವುದಕ್ಕೆ ಮುಂದೆ ಬರುತ್ತಿಲ್ಲ. ಕಾರಣವೇನೆಂದರೆ ಒಂದು ಮೀಟರ್‌ಗೆ 170-180 ಷೆಡ್ಯೂಲ್ ರೇಟ್ ಇದೆ. ಈ ಎಲ್ಲಾ ಕಾರಣಗಳಿಂದ ಹೆಚ್ಚುವರಿಯಾಗಿರತಕ್ಕಂತಹ ಬೆಲೆ 220 ರೂಪಾಯಿಯವರೆಗೆ ಕೇಳುತ್ತಿದ್ದಾರೆ. ಜಿಲ್ಲಾ ಪರಿಷತ್ತಿನಲ್ಲಿ ಇದರ ಬಗ್ಗೆ ತೀರ್ಮಾನ ಮಾಡಿ ಹೆಚ್ಚಿಗೆ ಬೆಲೆ ಕೊಟ್ಟಾದರೂ ಕೂಡ ಬಾವಿ ಹಾಕಿಸಿ ಎಂದು ಹೇಳಿದೆವು. ಅಲ್ಲಿನ ಮುಖ್ಯ ಕಾರ್ಯದರ್ಶಿಯವರು ಅದಕ್ಕೆ ಒಪ್ಪುತ್ತಿಲ್ಲ. ಸರಕಾರದಿಂದ ಆಜ್ಞೆ ಬರುವವರೆಗೆ ಏನೂ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದಾರೆ. ಕೊಳವೆ ಬಾವಿ ಹಾಕಿಸುವುದಕ್ಕಲ್ಲ ಕೇಸಿಂಗ್ ಪೈಪು ಸಹ ಸಿಗುತ್ತಿಲ್ಲ. ಈ ಎರಡು ಕಾರಣದಿಂದ ಕೆಲಸ ತಡವಾಗುತ್ತಿದೆ.